ಶ್ರೀ ಅಲ್ಕೋಡ್ ಹನುಮಂತಪ್ಪ :– ಮಾನ್ಯ ಸಚಿವರು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತಾರೆ. ನಮಗೆ ವಿಶೇಷ ಆದ್ಯತೆಯ ಮೇಲೆ ಒಂದೆರಡು ಹಾಸ್ಟೆಲ್‌ಗಳನ್ನು ಕೊಡುವಲ್ಲಿ ಏನೂ ತೊಂದರೆಯಾಗುವುದಿಲ್ಲ. ಏಕೆಂದರೆ, ಶಿಕ್ಷಣದ ಗುಣಮಟ್ಟ ಬೆಳೆಯಬೇಕೆಂದರೆ, ಆ ಭಾಗದಲ್ಲಿ ಬಹುತೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ, ಅಲ್ಲಿ ಶಿಕ್ಷಣದ ಗುಣಮಟ್ಟ ಬಹಳ ಕಡಿಮೆ ಇರುವುದರಿಂದ, ಮಕ್ಕಳಿಗೆ ಅನಾನುಕೂಲತೆ ಇರುವುದರಿಂದ ಅನುಕೂಲತೆಗೊಸ್ಕರವಾಗಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತಾವು ವಿಶೇಷ ಆದ್ಯತೆಯಲ್ಲಿ ಎರಡು ಹಾಸ್ಟೆಲ್‌ಗಳನ್ನು ಮಂಜೂರು ಮಾಡಬೇಕು. ಮುಂಡರಗಿಯಲ್ಲಿ ವಸತಿ ನಿಲಯ ಇಲ್ಲ. ಹಿರೇಬೂದೂರು, ಚಿಕ್ಕಬೂದೂರು ಎನ್ನತಕ್ಕ ನಮ್ಮ ದೊಡ್ಡ ಊರುಗಳಲ್ಲೂ ವಸತಿ ನಿಲಯಗಳು ಇಲ್ಲ. ಅಲ್ಲಿಗೆ ವಸತಿ ನಿಲಯಗಳನ್ನು ಮಂಜೂರುಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಡಾ॥ ವೈ. ನಾಗಪ್ಪ :– ಮಾನ್ಯ ಅಧ್ಯಕ್ಷರೆ, ಈ ಸಲ ಹಾಸ್ಟೆಲ್‌ಗಳನ್ನು ಮಂಜೂರು ಮಾಡುವಾಗ ಖಂಡಿತ ಅವರಿಗೂ ಆದ್ಯತೆಯನ್ನು ಕೊಡುತ್ತೇನೆ.

ಕರ್ನಾಟಕ ರೇಷ್ಮೆ ಕೈಗಾರಿಕಾಭಿವೃದ್ಧಿ ನಿಗಮ :

250 (3287) ಶ್ರೀ ಸುನಿಲ್ ಕುಮಾರ್ ವಿ. (ಕಾರ್ಕಳ) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರೇಷ್ಮೆ ಕೈಗಾರಿಕಾಭಿವೃದ್ಧಿ ನಿಗಮ (ಕೆ.ಎಸ್.ಐ.ಸಿ) ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಯಾವಾಗಿನಿಂದ ನಷ್ಟ ಅನುಭವಿಸುತ್ತಿದೆ ಹಾಗೂ ನಷ್ಟದ ಪ್ರಮಾಣ ಎಷ್ಟು;

ಇ) ಈ ನಷ್ಟಕ್ಕೆ ಕಾರಣಗಳೇನು;

ಈ) ಕೇವಲ ಮೂರು ವರ್ಷಗಳಲ್ಲಿ 3245.75 ಲಕ್ಷ ರೂ.ಗಳ ನಷ್ಟದಲ್ಲಿರುವ ಸದರಿ ಸಂಸ್ಥೆಯನ್ನು ಸರ್ಕಾರ ಮುಚ್ಚಲು ನಿರ್ಧರಿಸಿದೆಯೇ;

ಉ) ಯಾವಾಗಿನಿಂದ ಮುಚ್ಚಲ್ಪಡಲಾಗಿತ್ತದೆ;

ಊ) ಇಲ್ಲದಿದ್ದಲ್ಲಿ ಕಾರಣವೇನು;

ಋ) ನಷ್ಟ ಸರಿದೂಗಿಸಲು ಸರ್ಕಾರದ ಕ್ರಮಗಳೇನು;

ಖಖ) ನಷ್ಟ ಅನುಭವಿಸಿರುವ ಬಗ್ಗೆ ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು?

ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಹೌದು.

ಆ) ಈ ನಿಗಮವು 1980 ರಲ್ಲಿ ಪ್ರಾರಂಭವಾದಾಗಿನಿಂದ 1981–82, 1982–83, 1983–84, 1993–94, 1994–95 ಮತ್ತು 1997–98ರ ವರ್ಷಗಳನ್ನು ಹೊರತುಪಡಿಸಿ ನಷ್ಟವನ್ನು ಅನುಭವಿಸಿದೆ. ದಿನಾಂಕ: 31–3–2004 ರಲ್ಲಿದ್ದಂತೆ ಒಟ್ಟು ರೂ.50.93 ಕೋಟಿಗಳ ನಷ್ಟ ಅನುಭವಿಸಿದೆ.

ಇ) ಕೆ.ಎಸ್.ಐ.ಸಿ.ಯು ನಷ್ಟ ಅನುಭವಿಸಿರುವುದಕ್ಕೆ ಕಾರಣಗಳು ಕೆಳಕಂಡಂತಿವೆ.

1. ದುಡಿಯುವ ಬಂಡವಾಳ ಕೊರತೆ

2. ಹೆಚ್ಚುವರಿ ಮಾನವ ಸಂಪನ್ಮೂಲ

3. ಹೆಚ್ಚಾದ ಮೇಲ್ವೆಚ್ಚಗಳು

4. ಕಚ್ಚಾ ಸಾಮಗ್ರಿಗಳ ಕೊರತೆ

5. ಜೂಟು ರೇಷ್ಮೆ ಗಿರಣಿಯ ಉತ್ಪನ್ನಗಳ ಮಾರುಕಟ್ಟೆಯಲ್ಲಿ ನಿಗದಿತ ಬೆಲೆ ಸಿಗದೆ ಇರುವುದು.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ, ಋ, ಖಖ) ಸರ್ಕಾರವು ನಿಗಮವನ್ನು ಪುನಶ್ಚೇತನಗೊಳಿಸಲು ಮತ್ತು ಇದರ ನೆಟ್ ವರ್ತ್‌ನ್ನು ಪಾಸಿಟಿವ್ ಮಾಡಲು ಆಗಸ್ಟ್ 2003 ರಲ್ಲಿ ಪುನರ್ ನಿರ್ಮಾಣ ಪ್ಯಾಕೇಜನ್ನು ಅನುಮೋದಿಸಿದೆ.

ಈ ಆದೇಶದಲ್ಲಿ ಒಳಗೊಂಡಿರುವ ಸೂಚನೆಗಳನ್ವಯ ನಿಗಮವು ಈ ಕೆಳಗೆ ತಿಳಿಸಿದ ಕ್ರಮಗಳನ್ನು ಕೈಗೊಂಡಿರುತ್ತದೆ.

* ಚನ್ನಪಟ್ಟಣದ ಜೂಟು ರೇಷ್ಮೆ ಗಿರಣಿ 425 ಮತ್ತು ರೇಷ್ಮೆ ನೂಲು ತೆಗೆಯುವ ಘಟಕ, ಕನಕಪುರ 227, ಕಾರ್ಮಿಕರುಗಳಿಗೆ ಸ್ವಯಂ ನಿವೃತ್ತಿ ನೀಡಿ, 17.56 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

* ನಿಗಮದಿಂದ ಸರ್ಕಾರಕ್ಕೆ ಬಾಕಿ ಇದ್ದ ರೂ.22.91 ಕೋಟಿಗಳ ಸಾಲವನ್ನು ಈಕ್ವಿಟಿಯನ್ನಾಗಿ ಮಾರ್ಪಾಟು ಮಾಡಿ ನಿವ್ವಳ ಮೌಲ್ಯವನ್ನು ಸಕಾರಾತ್ಮಕವಾಗಿಸಿದೆ ಹಾಗೂ ಬಿ.ಐ.ಎಫ್.ಆರ್.ನಿಂದ ಹೊರಬಂದಿದೆ.

* ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು ಮತ್ತು ರೇಷ್ಮೆ ನೂಲು ತೆಗೆಯುವ ಘಟಕ ಟಿ.ನರಸೀಪುರದಲ್ಲಿಯೂ ಹೆಚ್ಚುವರಿ ಸಿಬ್ಬಂದಿಗಳನ್ನು ಗುರುತಿಸಲಾಗಿದೆ. ಮತ್ತು 229 ನೌಕರರಿಗೆ ಸ್ವಯಂ ನಿವೃತ್ತಿ ನೀಡಲಾಗಿದೆ. ಅವರ ಕ್ಲೇಮ್‌ಗಳನ್ನು ಇತ್ಯರ್ಥಗೊಳಿಸಲು ಸರ್ಕಾರವು ರೂ.7.02 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. ಕಚ್ಚಾ ವಸ್ತುವಿನ ಲಭ್ಯತೆಯನ್ವಯ ತಿಂಗಳಿಗೆ 25,000 ದಿಂದ 30,000 ಮೀಟರು ಬಟ್ಟೆಯ ಉತ್ಪಾದನೆ ಹಂತವನ್ನು ಕಾಯ್ದುಕೊಳ್ಳಲಾಗಿದೆ.

* ಉತ್ಪಾದನೆಯನ್ನು ಸುಧಾರಿಸುವ ದೃಷ್ಟಿಯಿಂದ 159 ನೇಯ್ಗೆ ಮಗ್ಗಗಳಲ್ಲಿ 127 ಮಗ್ಗಗಳನ್ನು ಒಳ್ಳೆಯ ಕಾರ್ಯ ಸ್ಥಿತಿಗೆ ತರಲಾಗಿದೆ. ಉದ್ಯೋಗಿಗಳು ಒಂದೇ ಶಿಫ್ಟ್‌ನಲ್ಲಿ ಕೆಲಸ ಮಾಡುವಂತೆ ಮಾಡಲಾಗಿದೆ ಮತ್ತು ಉತ್ಪಾದನೆಯ ಗುರಿಯನ್ನು ನಿಗದಿಪಡಿಸಲಾಗಿದೆ.

* ಇದ್ದಲು ಬಳಕೆಯನ್ನು ಕಡಿಮೆಗೊಳಿಸಲು ಸೋಲಾರ್ ವಾಟರ್ ಹೀಟರ್‌ಗಳನ್ನು ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರಿನಲ್ಲಿ ಅಳವಡಿಸಲಾಗಿದೆ. ಇದರಿಂದಾಗಿ 40% ಕಡಿಮೆ ಇದ್ದಲು ಬಳಕೆಯಾಗುತ್ತದೆ.

* ಹಿಂದೆ ದಲ್ಲಾಳಿ ಮೂಲಕ ಖರೀದಿ ಮಾಡುತ್ತಿದ್ದ ರೀತಿಯನ್ನು ಬದಲಾಯಿಸಿ ಸಿಂಘರಿನಿ ಕೊಲೈರೀಸ್ ಸಂಸ್ಥೆಯಿಂದ ನೇರವಾಗಿ ಒಳ್ಳೆಯ ಗುಣಮಟ್ಟದ ಇದ್ದಲನ್ನು ಸಂಗ್ರಹಿಸಲಾಗುತ್ತದೆ.

* ಕಡಿಮೆ ರೆಂಡಿಟ ನೂಲು ಪಡೆಯಲು ಒಳ್ಳೆಯ ಗುಣಮಟ್ಟದ ರೇಷ್ಮೆ ಗೂಡುಗಳನ್ನು ಮಾರುಕಟ್ಟೆಯಿಂದ ಖರಿದಿಸಲಾಗುತ್ತಿದೆ.

* ಕಚ್ಚಾ ವಸ್ತುಗಳಾದ ರೇಷ್ಮೆ ದಾರ ಮತ್ತು ಚಿನ್ನದ ಲೇಸ್‌ಗಳನ್ನು ಪರಿಣಾಮಕಾರಿಯಾದ ಚೌಕಾಸಿಯ ವ್ಯಾಪಾರದ ಮೂಲಕ ಸಮಂಜಸವಾದ ದರದಲ್ಲಿ ಖರೀದಿಸಲಾಗುತ್ತಿದೆ.

* ಹೆಚ್ಚು ಗ್ರಾಹಕರುಗಳನ್ನು ಆಕರ್ಷಿಸಲು ಹೊಸ ಡಿಸೈನ್‌ಗಳನ್ನು ತರಲಾಗಿದೆ. ಮಾರಾಟ ಮಳಿಗೆಗಳನ್ನು ಆಧುನೀಕರಣಗೊಳಿಸಲಾಗಿದೆ. ಪ್ರಮುಖ ಪ್ರದೇಶವಾದ ಗಾಂಧಿ ಬಜಾರ್‌ನಲ್ಲಿ ಹೊಸ ಮಳಿಗೆಯನ್ನು ತೆರೆಯಲಾಗಿದೆ.

* ಗ್ರಾಹಕರೊಂದಿಗೆ ಮೈತ್ರಿಯುತವಾಗಿರಲು ಮಾರಾಟ ಸಹಾಯಕರಿಗೆ ವೃತ್ತೀಯ ಏಜೆನ್ಸಿಯಿಂದ ತರಬೇತಿ ನೀಡಲಾಗಿದೆ. ಉತ್ಪಾದನೆಯನ್ನು ರಾಜ್ಯದ ಹೊರಗಡೆ ಕೂಡ

ಮಾರಾಟ ಮಾಡಲು ಪ್ರಾರಂಭಿಸಲಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳು, ಬ್ಯಾಂಕುಗಳು ಮತ್ತು ಐ.ಟಿ.ಕಂಪನಿಗಳೊಂದಿಗೆ ಸಂಪರ್ಕ ನಡೆಸಿ ಸಾಂಸ್ಥಿಕ ಮಾರಾಟವನ್ನು ಬೆಳೆಸಲಾಗಿದೆ.

* ಐ.ಎಸ್.ಓ.9001–2000 ಇದನ್ನು ಕರ್ನಾಟಕದ ರೇಷ್ಮೆ ಉದ್ಯಮ ನಿಗಮದ ಎಲ್ಲಾ ಘಟಕಗಳಲ್ಲಿ ಜಾರಿಗೊಳಿಸಲಾಗಿದೆ ಮತ್ತು ಗುಣಮಟ್ಟ ದೃಢೀಕರಣ ಸಂಸ್ಥೆಯು ಇದನ್ನು ಐ.ಎಸ್.ಓ ಸರ್ಟಿಫಿಕೇಟ್ ನೀಡಲು ಶಿಫಾರಸ್ಸು ಮಾಡಿರುತ್ತದೆ.

ಶ್ರೀ ವಿ. ಸುನಿಲ್ ಕುಮಾರ್ :– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರೇಷ್ಮೆ ಕೈಗಾರಿಕಾಭಿವೃದ್ಧಿ ನಿಗಮದಲ್ಲಾದಂಥ ಭ್ರಷ್ಟಾಚಾರದ ಕುರಿತಂತೆ ಪ್ರಶ್ನೆಯನ್ನು ಕೇಳಿದ್ದೆ. ಆದರೆ, ಅಧಿವೇಶನದಲ್ಲಿ ನಾನು ಕೇಳಿದಂಥ ಪ್ರಶ್ನೆಗೂ ಈಗ ಕೇಳಿರುವಂಥ ಪ್ರಶ್ನೆಗೂ ಅಧಿಕಾರಿಗಳು ಬೇರೆ ಬೇರೆ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ಕಳೆದ ಸಾರಿ ಅಧಿವೇಶನದಲ್ಲಿ ಎಷ್ಟು ನಷ್ಟವಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದಾಗ 3245 ಲಕ್ಷ ರೂ. ಎಂದು ಸರ್ಕಾರ ವರದಿ ಕೊಟ್ಟಿತ್ತು. ಈ ಅಧಿವೇಶನದಲ್ಲಿ ಈಗ 50 ಕೋಟಿ ನಷ್ಟವಾಗಿದೆಯೆಂದು ಕೊಟ್ಟಿದ್ದಾರೆ. ಆದ್ದರಿಂದ ಈ ನಿಗಮದಲ್ಲಿ ಒಟ್ಟು ಎಷ್ಟು ಕೋಟಿ ರೂ. ನಷ್ಟವಾಗಿದೆ ಎಂಬುದನ್ನು ಸಚಿವರು ಸ್ಪಷ್ಟಪಡಿಸಬೇಕು. ಎರಡನೆಯದಾಗಿ, ಈ ನಿಗಮ ನಷ್ಟವಾಗಲೂ ಅಲ್ಲಿರುವ ವ್ಯವಸ್ಥಾಪಕ ನಿರ್ದೇಶಕರೇ ಕಾರಣ ಎನ್ನುವ ಹೇಳಿಕೆಯನ್ನು ಈ ಹಿಂದೆಯೇ ಸಚಿವರು ಕೊಟ್ಟಿದ್ದರು. ಇದರ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತಗೆದುಕೊಂಡಿದೆ? ಇದಕ್ಕೆ ಸಿ.ಓ.ಡಿ ತನಿಖೆಯನ್ನು ಏಳು ದಿವಸಗಳೊಳಗೆ ಮಾಡುತ್ತೇವೆಂದು ಹಿಂದಿನ ಅಧಿವೇಶನದಲ್ಲಿ ಸಚಿವರು ಭರವಸೆ ಕೊಟ್ಟಿದ್ದರು. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ತಿಳಿಸಬೇಕು. ಮೂರನೆಯ ಸಂಗತಿ, ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ಉದ್ದಿಮೆ ನಷ್ಟವನ್ನು ಅನುಭವಿಸುತ್ತಿದ್ದರೂ ಆ ಉದ್ದಿಮೆಗೆ ವಿ.ಐ.ಪಿ ಗಳು ಬಂದಾಗ ಗಿಫ್ಟ್‌ನ್ನು ಕೊಡುವುದಕ್ಕೋಸ್ಕರ ಆ ನಿಗಮ 8 ಲಕ್ಷದ 12 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದೆ. ಪ್ರವಾಸ ಭತ್ಯೆಯೆಂದು ಎರಡು ವರ್ಷದಲ್ಲಿ ಆರೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ನಷ್ಟವನ್ನು ಅನುಭವಿಸುತ್ತಿರುವಂಥ ಈ ಸಂಸ್ಥೆಗೆ ವ್ಯವಸ್ಥಾಪಕ ನಿರ್ದೇಶಕರೇ ಈ ರೀತಿ ಭ್ರಷ್ಟಾಚಾರ ಮಾಡಲು ಕಾರಣ ಎನ್ನುವಂಥ ಸಂಗತಿ ಬಹಿರಂಗವಾಗಿದ್ದರೂ ಸರ್ಕಾರ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಅದಕ್ಕಾಗಿ ಮಾನ್ಯ ಸಚಿವರು ಯಾವಾಗ ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಸ್ಪಷ್ಟ ಮಾಡಬೇಕು.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಈ ನಿಗಮವು 1980ನೇ ಇಸವಿಯಲ್ಲಿ ಪ್ರಾರಂಭವಾಯಿತು. ಅಂದಿನಿಂದ 1998ನೇ ಇಸವಿಯವರೆಗೆ ಇದು ಲಾಭದಲ್ಲಿತ್ತು.

ತದನಂತರ 31–3–2004ರಲ್ಲಿ 50.93 ಲಕ್ಷ ನಷ್ಟ ಅನುಭವಿಸಿತು. ನಷ್ಟಕ್ಕೆ ಕಾರಣ, ಅಧಿಕಾರಿಗಳು ಭ್ರಷ್ಟಾಚಾರ ಮಾಡಿದರು ಎಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ ಅದರ ಬಗ್ಗೆ ಹೇಳುವುದಾದರೆ, ಹಿಂದೆ ಇದ್ದಂಥ ಎಂ.ಡಿ. ಯವರು ಟಿ.ಎ. ತೆಗೆದುಕೊಳ್ಳುವ ವಿಚಾರದಲ್ಲಿ ಸುಳ್ಳು ಬಿಲ್ಲು ತಯಾರು ಮಾಡಿರುವ ವಿಚಾರ ಮತ್ತು ಸ್ಯಾರೀಸ್‌ನ್ನು ಗಿಫ್ಟ್ ಆಗಿ ತೆಗೆದುಕೊಂಡು ಅಕೌಂಟಿಗೆ ತೆಗೆದುಕೊಂಡಿರುವ ವಿಚಾರದಲ್ಲಿ ವಿಚಾರಣೆಯಾಗಿ ಅದು ಸಾಬೀತಾಗಿದೆ. ಆ ರೀತಿ ಸಾಬೀತಾದ ನಂತರ ನಾನು 20–1–2005ನೇ ಇಸವಿಯಲ್ಲಿ ಮುಖ್ಯಕಾರ್ಯದರ್ಶಿಯವರಿಗೆ ಇವರ ಮೇಲೆ ಕ್ರಮಕೈಗೊಳ್ಳಿ ಎಂದು ಪತ್ರವನ್ನು ಬರೆದಿದ್ದೇನೆ. ಮಾನ್ಯ ಸದಸ್ಯರು ಕೇಳಿದಂತೆ ಅಂಥ ಭ್ರಷ್ಟ ಅಧಿಕಾರಿಗಳು ನಮ್ಮಲ್ಲಿ ಹೆಚ್ಚಿಗೆ ಇಲ್ಲ. ಒಬ್ಬರೇ ಒಬ್ಬರು ಅಧಿಕಾರಿಗಳು ಆ ರೀತಿ ಇದ್ದರು, ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತಾನಾಡಿದ್ದೇನೆ. ಅದರ ಬಗ್ಗೆ ಸರ್ಕಾರ ಕ್ರಮಕೈಗೊಳ್ಳುತ್ತದೆ. ಎರಡನೆಯದಾಗಿ, ಇಲ್ಲಿ ನಷ್ಟವಾಗಲು ಕಾರಣ, ನಮಗೆ ಹೆಚ್ಚಿಗೆ ಬಂಡವಾಳ ಇರಲಿಲ್ಲ. ಸರ್ಕಾರದಿಂದ ಹೆಚ್ಚಿಗೆ ಬಂಡವಾಳವನ್ನು ಕೊಟ್ಟಿರಲಿಲ್ಲ. ಯಾವಾಗ ಬಂಡವಾಳ ಇರಲಿಲ್ಲ ಆಗ ನಷ್ಟ ಅನುಭವಿಸಲು ಕಾರಣವಾಯಿತು. ಮತ್ತು ಈ ಹಿಂದೆ ನೌಕರಿ ಕೊಡುವ ದೃಷ್ಟಿಯಿಂದ ಹೆಚ್ಚು ಕೆಲಸಗಾರರನ್ನು ನೇಮಕ ಮಾಡಿಕೊಂಡಿದ್ದರು. ಆದ್ದರಿಂದ ಹೆಚ್ಚಿಗೆ ಸಂಬಳ ಕೊಡಲು ಆಗಲಿಲ್ಲ. ಉತ್ಪಾದನೆ ಹೆಚ್ಚು ಮಾಡಿದರೂ ಮಾರುಕಟ್ಟೆಯಲ್ಲಿ ಬೆಲೆ ಜಾಸ್ತಿ ಸಿಗಲಿಲ್ಲ. ಚೆನ್ನಪಟ್ಟಣ ಮತ್ತು ಕನಕಪುರದಲ್ಲಿರತಕ್ಕ ಫಿಲೇಚರ್ ಮತ್ತು ಸ್ಪಿನ್ನಿಂಗ್ ಮಿಲ್‌ಗಳೇನಿತ್ತು. ಅದರಲ್ಲಿ ಕಚ್ಚಾವಸ್ತುಗಳಿಗೆ ಹೆಚ್ಚಿಗೆ ಹಣವನ್ನು ಕೊಡಬೇಕಾಗಿತ್ತು. ಆದರೆ, ನಾವು ತಯಾರು ಮಾಡಿದ ಸಾಮಗ್ರಿಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆ ಸಿಗಲಿಲ್ಲ. ಅದೂ ಸಹ ನಷ್ಟ ಅನುಭವಿಸಲು ಕಾರಣವಾಯಿತು. ಇದಕ್ಕೆ ರೆಮಿಡಿಯಾಗಿ ಸರ್ಕಾರಕ್ಕೆ ಹೆಚ್ಚಿಗೆ ಹಣವನ್ನು ಕೇಳಲಾಗಿದ್ದು ಸರ್ಕಾರ ಆಗಸ್ಟ್ 2003 ರಲ್ಲಿ ಇದರ ಪುನರ್ ನಿರ್ಮಾಣ ಪ್ಯಾಕೇಜ್ ಅನುಮೋದನೆ ಮಾಡಿದಮೇಲೆ ಹೆಚ್ಚಿನ ಸಿಬ್ಬಂದಿಗಳೇನಿದ್ದರು ಅವರಿಗೆ ವಿ.ಆರ್.ಎಸ್.ನ್ನು ಕೊಟ್ಟು, ಚೆನ್ನಪಟ್ಟಣದಲ್ಲಿ 425, ಕನಕಪುರದಲ್ಲಿ 227 ಕಾರ್ಮಿಕರಿಗೆ 17.56 ಕೋಟಿ ರೂಪಾಯಿ ವೆಚ್ಚದಲ್ಲಿ ಅವರುಗಳಿಗೆ ವಿ.ಆರ್.ಎಸ್.ಕೊಟ್ಟು ಅವರು ಮನೆಗೆ ಹೋದರು. ಆದ್ದರಿಂದ ಈಗ ನಮಗೆ ನಷ್ಟ ಕಡಿಮೆಯಾಗಿದೆ. ಅದೇ ರೀತಿ ಮೈಸೂರಿನಲ್ಲಿ ನಮ್ಮ ಸಿಲ್ಕ್ ಫ್ಯಾಕ್ಟರಿ ಇದೆ, ಅದರಲ್ಲಿ ನಷ್ಟವನ್ನು ಸರಿಪಡಿಸುವುದಕ್ಕೋಸ್ಕರ ಈ ಹಿಂದೆ ಅಲ್ಲೇನು ಕೋಲನ್ನು ಉಪಯೋಗ ಮಾಡಿ ಸ್ಟೀಮ್ ಮಾಡುತ್ತಿದ್ದರು. ಅದಕ್ಕೆ ಬದಲಾಗಿ ಈಗ ನಾವು ಸೋಲಾರನ್ನು ಉಪಯೋಗ ಮಾಡಿ 40 ಪರ್‌ಸೆಂಟ್ ನಷ್ಟವನ್ನು ಕಡಿಮೆ ಮಾಡಿ ಲಾಭ ಬರುವ ರೀತಿಯಲ್ಲಿ ಮಾಡಿ ಅದನ್ನು ಪುನರ್ವಿನ್ಯಾಸ ಮಾಡಿದ್ದೇವೆ. ಮತ್ತು ಉತ್ತಮವಾದ ಗೂಡನ್ನು ಕೊಂಡುಕೊಳ್ಳಲು ಈ ಹಿಂದೆ ಕಮಿಷನ್ ಕೊಡುವ ವ್ಯವಸ್ಥೆಯೇನಿತ್ತು ಅದನ್ನು ಬಿಟ್ಟು ನೇರವಾಗಿಯೇ ನಾವು

ಕೊಂಡುಕೊಂಡು ನೂಲನ್ನು ತಯಾರು ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇದೇ ರೀತಿ ಟಿ.ನರಸೀಪುರದಲ್ಲಿ ಮತ್ತು ಇನ್ನಿತರೆ ಕಡೆ ಇರತಕ್ಕ ಸುಮಾರು 229 ಜನ ನೌಕರರು ವಿ.ಆರ್.ಎಸ್.ಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಸರ್ಕಾರ ಅದನ್ನೂ ಅನುಮೋದನೆ ಮಾಡಿದೆ, ಅವರಿಗೂ ಸುಮಾರು 7.02 ಕೋಟಿ ರೂ.ಗಳನ್ನು ವಿ.ಆರ್.ಎಸ್.ಗೆ ಕೊಟ್ಟು ಆ ನಷ್ಟವನ್ನು ಸರಿದೂಗಿಸಲು ಸರ್ಕಾರ ಈಗಾಗಲೇ ಕ್ರಮ ಕೈಗೊಂಡಿದೆ. ಮಾನ್ಯ ಸದಸ್ಯರು ಕೇಳುತ್ತಿರುವ ಮಾತಿನಲ್ಲಿ ಅರ್ಥವಿದೆ. ಆದರೆ, ಅಷ್ಟರಮಟ್ಟಿಗೆ ನಷ್ಟವಾಗಲೂ ನಾವು ಬಿಡುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್ :– ತಾವೇನು ರೇಷ್ಮೆ ಇಲಾಖೆಯ ಬಗ್ಗೆ ಭಾಷಣ ಮಾಡುತ್ತಿದ್ದಿರೋ ಅಥವಾ ಉತ್ತರ ಕೊಡುತ್ತಿದ್ದಿರೋ?

ಶ್ರೀ ಸಿ. ಚನ್ನಿಗಪ್ಪ :– ಉತ್ತರ ಕೊಡುತ್ತಿದ್ದೇನೆ. ಅವರು ಕೇಳಿದ್ದಕ್ಕೆಲ್ಲಾ ಸರಿಯಾಗಿ ಉತ್ತರವನ್ನು ಕೊಡುತ್ತಿದ್ದೇನೆ.

ಶ್ರೀ ಎಸ್. ರಾಜೇಂದ್ರನ್ :– ಅವರು ಕೇವಲ ಒಬ್ಬರು ಎಂ.ಡಿ.ಯವರು ಭ್ರಷ್ಟಾಚಾರ ಮಾಡಿದ್ದರೆಂದು ಹೇಳಿದರು. ಇನ್ನು ಬೇರೆ ಯಾರೂ ಮಾಡಿಲ್ಲವೆ?

ಅಧ್ಯಕ್ಷರು :– ಅವರು ಉತ್ತರ ಕೊಡಲು ಬಿಡಿ.

ಶ್ರೀ ಸಿ. ಚನ್ನಿಗಪ್ಪ :– ಬೇರೆ ಎಂ.ಡಿಯವರು ಭ್ರಷ್ಟಾಚಾರ ಮಾಡಿರುವ ಬಗ್ಗೆ ನನ್ನ ಗಮನಕ್ಕೆ ಬಂದರೆ ಅವರ ಬಗ್ಗೆ ಸಹ ಕ್ರಮ ತೆಗೆದುಕೊಳ್ಳುತ್ತೇನೆ.

ನನಗೆ ಅದರ ಬಗ್ಗೆ ಗಮನಕ್ಕೆ ಬಂದಿಲ್ಲ. ಬೇರೆ ಎಂ. ಡಿ. ಯವರೇನಾದರೂ ಅಲ್ಲಿ ತಪ್ಪು ಮಾಡಿದ್ದರೆ ಅದು ನಮ್ಮ ಗಮನಕ್ಕೆ ಬಂದರೆ ನಮ್ಮ ಸರ್ಕಾರ ಯಾವುದೇ ಮೂಲಾಜಿಲ್ಲದೆ ಕ್ರಮ ಕೈಗೊಳ್ಳುತ್ತದೆ.

ಶ್ರೀ. ವಿ. ಸುನಿಲ್‌ಕುಮಾರ್ :– ಮಾನ್ಯ ಅಧ್ಯಕ್ಷರೆ, ನಿಗಮದ ಅಭಿವೃದ್ಧಿಯ ದೃಷ್ಟಿಯಿಂದ ನಾವು ಅದರಲ್ಲಿ ಏನೇನು ಮಾಡಬೇಕು ಎನ್ನುವ ಬಗ್ಗೆ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ. ಆದರೆ ನನ್ನ ಮೂಲ ಪ್ರಶ್ನೆ ಇರುವಂಥದ್ದು ಈ ನಿಗಮದಲ್ಲಿ ಏನು ಭ್ರಷ್ಟಾಚಾರ ನಡೆದಿತ್ತು ಇದರ ಬಗ್ಗೆ ಒಂದು ವಾರದೊಳಗೆ ವರದಿಯನ್ನು ತರಿಸಿಕೊಂಡು ಕ್ರಮಕೈಗೊಳ್ಳುತ್ತೇವೆ ಎಂಬ ಹೇಳಿಕೆಯನ್ನು ಜನವರಿಯಲ್ಲಿ ಕೊಟ್ಟಿದ್ದರು. ಆ ವರದಿ ಏನಾಯಿತು? ಆ ಅಧಿಕಾರಿಯ ಮೇಲೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ? ಏಕೆ ಸರ್ಕಾರ ಮೀನಾಮೇಷ ಎಣಿಸುತ್ತಿದೆ? ಎರಡು ವರ್ಷದಲ್ಲಿ 6 1/2 ಲಕ್ಷ ರೂಪಾಯಿ ಭ್ರಷ್ಟಾಚಾರ ನಡೆದಿದೆ..... ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಸಿ. ಚನ್ನಿಗಪ್ಪ :– ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಈಗಾಗಲೇ ಬಹಳ ತೀಕ್ಷ್ಣವಾಗಿ ಈ ಪ್ರಶ್ನೆಯನ್ನು ಕೇಳಿದ್ದಾರೆ. ಜನವರಿ 27ರಲ್ಲಿ ಆ ಅಧಿಕಾರಿ ಮೇಲೆ action ತೆಗೆದುಕೊಳ್ಳಿ ಎಂದು ಈಗಾಗಲೇ ನಾವು ಪತ್ರವನ್ನು ಬರೆದಿದ್ದೇವೆ. ಅವರು ಐ.ಎ.ಎಸ್. ಅಧಿಕಾರಿಯಾದ ಕಾರಣ ಅದನ್ನು ಪುನರ್ ಪರಿಶೀಲನೆ ಮಾಡಬೇಕು, re-enquiry ಮಾಡಬೇಕೆಂದು ಈಗ ಆದೇಶ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೂ ಆಗಲೇ ವಿಷಯವನ್ನು ಹೇಳಿದ್ದಾರೆ. ಅದರ ಬಗ್ಗೆ ನಾವು ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಅಂತಹವರನ್ನು ಕ್ಷಮಿಸುವುದಿಲ್ಲ. ನಾನು ಈ ಬಗ್ಗೆ Chief Secretary ಯವರಿಗೆ ಪತ್ರ ಬರೆದ ನಂತರ, ಅದನ್ನು ಕೆಲವೇ ದಿನಗಳಲ್ಲಿ ಅವರು ಐ.ಎ.ಎಸ್. ಅಧಿಕಾರಿಯಾಗಿರುವುದರಿಂದ Central Government ನಿಂದ permission ತೆಗೆದುಕೊಂಡು ಆ ಅಧಿಕಾರಿ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ, ಆ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ.

ಅಧ್ಯಕ್ಷರು :– ಮುಂದಿನ ಪ್ರಶ್ನೆ ಎಸ್. ಶಿವಣ್ಣನವರದು.

ಒಬ್ಬ ಮಾನ್ಯ ಸದಸ್ಯರು :– ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು :– ಮಾನ್ಯ ಸಚಿವರು 20 ನಿಮಿಷ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಮತ್ತೆ ಮತ್ತೆ ಉಪ ಪ್ರಶ್ನೆಗೆ ನಾನು ಅವಕಾಶ ಕೊಡುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಶಿವಣ್ಣನವರೇ, ತಮ್ಮ ಪ್ರಶ್ನೆ ಕೇಳಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಸಚಿವರು ಉತ್ತರಿಸಲು 20 ನಿಮಿಷ ತೆಗೆದುಕೊಂಡರು ಎಂದರೆ ನಮ್ಮ ಗ್ರಹಚಾರ ಸರಿಯಿಲ್ಲವೆಂದು ಅರ್ಥವೇ?

ಅಧ್ಯಕ್ಷರು :– ಇವತ್ತು ಎದ್ದ ಘಳಿಗೆ ಸರಿಯಿಲ್ಲ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೆ, ದಯಮಾಡಿ ಕುಳಿತುಕೊಳ್ಳಿ.

ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಶುಲ್ಕ ವಿನಾಯಿತಿ ಸಮಸ್ಯೆ :

251 (3411) ಶ್ರೀ ಶಿವಣ್ಣ ಎಸ್. (ತುಮಕೂರು) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002–03, 2003–04 ಮತ್ತು 2004–05 ಸಾಲಿನಲ್ಲಿ ಶುಲ್ಕ ವಿನಾಯಿತಿ ಸಂಬಂಧ ಹಿಂದುಳಿದ ವರ್ಗಗಳಿಗೆ ಇಲಾಖಾ ಬಜೆಟ್‌ನಲ್ಲಿನ ನಿಗದಿಪಡಿಸಿದ ಬಿಡುಗಡೆಗೊಂಡ ಹಣದ ಮೊತ್ತವೆಷ್ಟು; ವೆಚ್ಚವಾಗಿರುವುದು ಎಷ್ಟು;